2. ಪ್ರಶ್ನೋತ್ತರಗಳು:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳು

181(2897) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ): ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ರಾಜ್ಯ ಮತ್ತು ಕೇಂದ್ರ ಅನುದಾನದ ಯೋಜನೆಗಳು ಯಾವುವು:

ಆ) ವಿಶ್ವ ಬ್ಯಾಂಕ್ ಅನುದಾನದಿಂದ ಜಾರಿಗೊಳಿಸಿದ ಯೋಜನೆಗಳು ಯಾವುವು:

ಇ) ಮೇಲ್ಕಂಡ ಯೋಜನೆಗಳಡಿಯಲ್ಲಿ ಹಾವೇರಿ ಜಿಲ್ಲೆಯಲ್ಲಿ ಎಷ್ಟು ಜನ ಮಹಿಳಾ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀಮತಿ ಭಾಗೀರಥಿ ಮುರುಳ ಸಿದ್ದನಗೌಡ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು):

ಅ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಈ ಕೆಳಕಾಣಿಸಿರುವ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿದೆ.

1. ರಾಜ್ಯ ಅನುದಾನಿತ ಯೋಜನೆಗಳು:-

ಅ. ಉದ್ಯೋಗಿನಿ ಯೋಜನೆ,

ಆ. ಮಹಿಳಾ ತರಬೇತಿ ಯೋಜನೆ,

ಇ. ದೇವದಾಸಿ ಪುನರ್‌ವಸತಿ ಯೋಜನೆ,

ಈ. ಮಾರುಕಟ್ಟೆ ಯೋಜನೆ

ಉ. ರಾಜ್ಯ ಸಂಪನ್ಮೂಲ ಕೇಂದ್ರ

ಊ. ನಗರ ಸ್ತ್ರೀಶಕ್ತಿ ಯೋಜನೆ

ಋ. ಲಂಬಾಣಿ ಕಸೂತಿ ಯೋಜನೆ

2. ಕೇಂದ್ರ ಸರ್ಕಾರ ಅನುದಾನಿತ ಯೋಜನೆಗಳು:-

ಅ. ಸ್ವಾವಲಂಬನ(ನೊರಾಡ್) ಯೋಜನೆ

ಆ. ಸ್ವೆಪ್ ಯೋಜನೆ.

ಆ) ವಿಶ್ವ ಬ್ಯಾಂಕ್ ನೆರವಿನೊಂದಿಗೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಅನುದಾನ ಪಡೆದು ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಯ ಹೆಸರು 'ಸ್ವಶಕ್ತಿ ಯೋಜನೆ'.

ಇ) 2004-05ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯ ತಾಲ್ಲೂಕುವಾರು ಪ್ರಯೋಜನ ಪಡೆದ ಫಲಾನುಭವಿಗಳ ಯೋಜನೆವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2897ಕ್ಕೆ

ಅನುಬಂಧ

2004-05ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯ (ತಾಲ್ಲೂಕುವಾರು) ಪ್ರಯೋಜನ ಪಡೆದ ಫಲಾನುಭವಿಗಳ ಯೋಜನಾವಾರು ವಿವರ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಅ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ರಾಜ್ಯ ಅನುದಾನದ ಯೋಜನೆಗಳು:

ಅ. ಉದ್ಯೋಗಿನಿ ಯೋಜನೆ.

ಆ. ಮಹಿಳಾ ತರಬೇತಿ ಯೋಜನೆ.

ಇ. ದೇವದಾಸಿ ಪುನರ್ ವಸತಿ ಯೋಜನೆ.

ಈ. ಮಾರುಕಟ್ಟೆ ನೆರವಿನ ಯೋಜನೆ.

ಉ. ನಗರ ಸ್ತ್ರೀಶಕ್ತಿ ಯೋಜನೆ.

ಊ. ಲಂಬಾಣಿ ಕಸೂತಿ.

ಈ ಮೇಲಿನ ಯೋಜನೆಗಳ ಅಡಿಯಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳ ವಿವರಗಳನ್ನು ತಾಲೂಕುವಾರು ಗುರಿ ಮತ್ತು ಸಾಧನೆಯೊಂದಿಗೆ ಮಾಹಿತಿ ಲಗತ್ತಿಸಿದೆ.

ಅ) ಉದ್ಯೋಗಿನಿ ಯೋಜನೆ:-

2004-05ನೇ ಸಾಲಿನಲ್ಲಿ ಉದ್ಯೋಗಿನಿ ಯೋಜನೆಯಡಿ ತಾಲೂಕುವಾರು ಸಾಧನೆ ಮಾಡಿದ ವಿವರ ಜಿಲ್ಲೆಗೆ ಒಟ್ಟು ಗುರಿ 46

ಕ್ರ.ಸಂ.	ತಾಲೂಕು	ತಾಲೂಕುವಾರು ಗುರಿ	ಸಾಧನೆ	ಬಿಡುಗಡೆ ಮಾಡಿದ ಸಹಾಯಧನ	ಷರಾ
1	ಹಾವೇರಿ	7	4	ರೂ. 30280-00	
2	ಬ್ಯಾಡಗಿ	5	4	ರೂ. 30000-00	
3	ಹಾನಗಲ್	8	1	ರೂ. 7500-00	
4	ಹಿರೇಕೆರೂರು	6	1	ರೂ. 7500-00	ಮಾರ್ಚ್ 31-03-2005
5	ಶಿಗ್ಗಾವ್	6	6	ರೂ. 38500-00	ರೊಳಗೆ ಉಳಿದ 16 ಸಾಧನೆ
6	ಸವಣೂರು	6	6	ರೂ. 27500-00	ಮಾಡಲಾಗುವುದು.
7	ರಾಣೆಬೆನ್ನೂರು	8	8	ರೂ. 49500-00	
	ಒಟ್ಟು	46	30	ರೂ.109780-00	

ಆ) ಮಹಿಳಾ ತರಬೇತಿ ಯೋಜನೆ: ಜಿಲ್ಲೆಗೆ ನಿಗದಿಪಡಿಸಿದ ಗುರಿ–11

ಕ್ರ.ಸಂ.	ಸಂಘ/ಸಂಸ್ಥೆ/ಮಹಿಳಾ ಮಂಡಲ ಹೆಸರು	ಚಟುವಟಿಕೆ ಹೆಸರು	ಪ್ರಯೋಜನಾ ಪಡೆದ ಫಲಾನುಭವಿಗಳ ಸಂಖ್ಯೆ	ಷರಾ
1	ಸರ್ವೋದಯ ಅಂಗವಿಕಲ ವಿದ್ಯಾಸಂಸ್ಥೆ, ಸಾಃ ಗೆಜ್ಜಿಹಳ್ಳಿ ತಾಃ ಹಾನಗಲ್	ಅಗರಬತ್ತಿ ತಯಾರಿಕೆ	30	ನಿಗದಿಪಡಿಸಿದ ಗುರಿ ಪ್ರಕಾರ ಸಾಧನೆ ಮಾಡಲಾಗಿದೆ.
2	ಇರಾಡ್ ಸಂಸ್ಥೆ, ಸಾಃಹಕ್ಕಿ ಆಲೂರು, ತಾಲ್ಲೂಕು ಹಾನಗಲ್	ಡ್ರೆಸ್ ಡಿಸೈನಿಂಗ್	20	
3	ಬಸವ ಸಿಸ್ಟಮ್ ಹಾರ್ಡ್‌ವೇರ್ ಮತ್ತು ನೆಟ್ ವರ್ಕಿಂಗ್ ಕಂಪ್ಯೂಟರ್, ರಾಣೆಬೆನ್ನೂರು	ಹಾರ್ಡ್‌ವೇರ್ ಮತ್ತು ನೆಟ್ ವರ್ಕಿಂಗ್	10	
4	ಅನ್ನಪೂರ್ಣ ಅಸೋಸಿಯೇಶನ್ ಹಾವೇರಿ	ಡ್ರೆಸ್ ಡಿಸೈನಿಂಗ್	20	
5	ಶ್ರೀ ಶಕ್ತಿ ಅಸೋಸಿಯೇಶನ್, ಹಾವೇರಿ	ಹೊಂ ಹೆಲ್ತ್ ಕೇರ್	20	
6	ಎಜುಕೇರ್ ಇನ್ ಫೋಟೆಕ್ ಕಂಪ್ಯೂಟರ್ ಸಂಸ್ಥೆ, ಶಿಗ್ಗಾಂವ	ಡಿಟಿಪಿ ಹಾಗೂ ಸ್ಕ್ರೀನ್ ಪ್ರಿಂಟಿಂಗ್	20	
7	ಚಂದನಾ ಮಹಿಳಾ ಮಂಡಲ ರಾಣೆಬೆನ್ನೂರು	ಬ್ಯೂಟಿಷಿನ್ ಕೋರ್ಸ್	15	
8	ಗುರು ಹುಚ್ಚೇಶ್ವರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಸಾಃ ಗುಡ್ಡದ ಮಲ್ಲಾಪುರ ತಾಲ್ಲೂಕು ಬ್ಯಾಡಗಿ	ಡ್ರೆಸ್ ಡಿಸೈನಿಂಗ್	20	

9	ಜನತಾ ಶಿಕ್ಷಣ ಸಂಸ್ಥೆ, ಹಾವೇರಿ	ಬ್ಯೂಟಿಷಿನ್ ಕೋರ್ಸ್	15	ಈ ಹನ್ನೊಂದು ಕಾರ್ಯಕ್ರಮಗಳು
10	ಸ್ಫೂರ್ತಿ ಯುವತಿ ಮಂಡಲ ಬಂಕಾಪುರ	ಡ್ರೆಸ್ ಡಿಸೈನಿಂಗ್	20	ಹೆಚ್ಚುವರಿ ಕ್ರಿಯಾ
11	ಸ್ಫೂರ್ತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅರೆಮಲ್ಲಾಪುರ, ರಾಣೆಬೆನ್ನೂರು ತಾಲ್ಲೂಕ್	ಬ್ಯೂಟಿಷಿನ್ ಕೋರ್ಸ್	15	ಯೋಜನೆಯ ಕಾರ್ಯಕ್ರಮಗಳು, ರೆಗ್ಯುಲರ್ ಕ್ರಿಯಾ ಯೋಜನೆಯನ್ನು ಈ ಜಿಲ್ಲೆಗೆ ಬಂದ –3–ತರಬೇತಿಯನ್ನು ಅನುಷ್ಠಾನ ಗೊಳಿಸುತ್ತಿದೆ.
	ಒಟ್ಟು		205	

ಇ: ದೇವದಾಸಿ ಪುನರ್‌ವಸತಿ ಯೋಜನೆ:

ಹಾವೇರಿ ಜಿಲ್ಲೆಯಲ್ಲಿ 617 ದೇವದಾಸಿ ಮಹಿಳೆಯರಿಗೆ ಪುನರ್‌ವಸತಿ ನೀಡಲು 2004–05ನೇ ಸಾಲಿನಲ್ಲಿ ರೂ. 4,50,900/–ಗಳ ಆರ್ಥಿಕ ಗುರಿ ನಿಗದಿಪಡಿಸಿದೆ.

ಈ: ಮಾರುಕಟ್ಟೆ ನೆರವಿನ ಯೋಜನೆ:–

ಕ್ರಮ ಸಂಖ್ಯೆ	ತಾಲ್ಲೂಕು	ನಿಗದಿಪಡಿಸಿರುವ ಗುರಿ	ಅನುಷ್ಠಾನಗೊಳಿಸಲು ನಿಗದಿಪಡಿಸಿರುವ ದಿನಾಂಕ	ಷರಾ
1	ಹಾನಗಲ್ ತಾಲ್ಲೂಕು	30	ಮಾರ್ಚ್ 25, 26 ಮತ್ತು 27 2005 ರಂದು ಈ ಯೋಜನೆಯಡಿಯಲ್ಲಿ ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಅನುಷ್ಠಾನ ಗೊಳಿಸಲು ನಿರ್ಧರಿಸಿದೆ.	

ಉ) ನಗರ ಸ್ವೀಶಕ್ತಿ ಯೋಜನೆ: ಜಿಲ್ಲೆಗೆ ಒಟ್ಟು ಗುರಿ 87

ಕ್ರಮ ಸಂಖ್ಯೆ	ತಾಲ್ಲೂಕು	ತಾಲೂಕುವಾರು ನಿಗದಿಪಡಿಸಿದ ಗುರಿ	ರಚನೆಮಾಡಿದ ಗುಂಪುಗಳ ಸಂಖ್ಯೆ (ಸಾಧನೆ)	ಈವರೆಗೆ ಉಳಿತಾಯ ಮಾಡಿದ ಹಣ (ರೂ. ಗಳಲ್ಲಿ)
1	ಶಿಗ್ಗಾವಿ	8	8	66020–00
2	ಬ್ಯಾಡಗಿ	8	8	65745–00
3	ಹಾವೇರಿ	25	25	200113–00

4	ಹಿರೇಕೆರೂರು	5	5	42575–00
5	ಸವಣೂರು	8	8	44740–00
6	ರಾಣೆಬೆನ್ನೂರು	25	25	202622–00
7	ಹಾನಗಲ್	8	8	70485–00
	ಒಟ್ಟು	87	87	692300–00

ಊ. ಲಂಬಾಣಿ ಕಸೂತಿ ಯೋಜನೆ:–

ಕ್ರ.ಸಂ.	ಸಂಘ/ಸಂಸ್ಥೆ/ಮಹಿಳಾ ಮಂಡಲದ ಹೆಸರು	ಚಟುವಟಿಕೆ ಹೆಸರು	ಫಲಾನುಭವಿಗಳ ಸಂಖ್ಯೆ	ತರಬೇತಿ ನಡೆಯುವ ಸ್ಥಳ	ಷರಾ
1	ಜನತಾ ಶಿಕ್ಷಣ ಸಂಸ್ಥಾನ ಹಾವೇರಿ	ಲಂಬಾಣಿ ಕಸೂತಿ	10	ಹೊಸೂರು ಲಂಬಾಣಿ ತಾಂಡಾ	ಮಹಿಳೆಯರಿಗೆ ಮಾತ್ರ
2	ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ, ಹಾವೇರಿ	ಲಂಬಾಣಿ ಕಸೂತಿ ತರಬೇತಿ	10	ಕಬ್ಬೂರು ತಾಂಡಾ	_"_
3	ಶಾಂತಾ ಮಹಿಳಾ ಹಾವೇರಿ	ಲಂಬಾಣಿ ಕಸೂತಿ ತರಬೇತಿ	10	ಗುಂಡೇನಹಳ್ಳಿ	_"_

ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ:– ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವಂಥ ಅನುದಾನದ ಯೋಜನೆಗಳು ಎಂದು ಇಲ್ಲಿ ಕೆಲವು ಯೋಜನೆಗಳನ್ನು ಕೊಟ್ಟಿದ್ದಾರೆ. ಈ ಯೋಜನೆಗಳು ನಮ್ಮ ಹಾವೇರಿ ಜಿಲ್ಲೆಯಲ್ಲಿ ಎಫೆಕ್ಟೀವ್ ಆಗಿ, ಸರಿಯಾದಂಥ ರೀತಿಯಲ್ಲಿ ನಡೆಯುತ್ತಾ ಇಲ್ಲ. ಕಾರಣವೇನೆಂದರೆ, ಇವುಗಳಿಗೆ ಕೊಡುತ್ತಿರುವಂಥ ಅನುದಾನ ಬಹಳ ಕಡಿಮೆ. ಈ ಕಡಿಮೆ ಅನುದಾನವನ್ನು ತೆಗೆದುಕೊಂಡು ಯಾವುದೇ ಸ್ತ್ರೀಶಕ್ತಿ ಗುಂಪುಗಳಾಗಲೀ, ಉದ್ಯೋಗ ಯೋಜನೆ, ಮಹಿಳಾ ಮತ್ತು ತರಬೇತಿಯ ಯಾವುದೇ ಯೋಜನೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಕಾರಣ ಅಂದರೆ, ಇವುಗಳಿಗೆ ಕೊಡುತ್ತಿರುವಂಥ ಅನುದಾನದ ಕೊರತೆ. ಇವರು ಈ ಅನುದಾನವನ್ನು ಪಡೆಯಬೇಕೆಂದರೆ, ಅನೇಕಸಾರಿ ಕಚೇರಿಗಳಿಗೆ ಅಡ್ಡಾಡಬೇಕಾಗಿದೆ. ಏನು ಸ್ತ್ರೀಶಕ್ತಿ ಗುಂಪುಗಳಿವೆ, ಆ ಗುಂಪುಗಳು ಅನಕ್ಷರಸ್ಥರಿಂದ ಕೂಡಿದಂಥ ಗುಂಪುಗಳು. ಆ ಗುಂಪುಗಳು ಇವತ್ತು ಕಚೇರಿಗಳಿಗೆ ಅಲೆದು, ಅಲೆದು ಅಧಿಕಾರಿಗಳನ್ನು ಹಿಡಿಯಬೇಕೆಂದರೆ ಸುಸ್ತಾಗಿ ಹೋಗುತ್ತಾರೆ. ಅಂತಹ ಅನಕ್ಷರಸ್ಥರು ಈ ರೀತಿಯಾಗಿ ಅಲೆದು, ಈ ಯೋಜನೆಗಳ ಸದುಪಯೋಗ ಪಡೆಯಲು ಸಾಧ್ಯವಾಗುವುದಿಲ್ಲ. ಅದಕ್ಕೆ ಕೂಡಲೇ ಒಂದು ಹೊಸ ನಿಯಮವನ್ನು ಮಾನ್ಯ ಮಂತ್ರಿಗಳು ರೂಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ:-- ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಗೆ ನಿಗದಿಪಡಿಸಿರತಕ್ಕಂಥ ಹಲವಾರು ಯೋಜನೆಗಳಂತೆ, ಅದೇ ಮಾದರಿಯಲ್ಲಿ ಇದೇ ಹಣದ ಆಧಾರದ ಮೇಲೆ ಬೇರೆ ಜಿಲ್ಲೆಗಳಲ್ಲಿ ಕೂಡ ಈ ಯೋಜನೆಗಳನ್ನು ನಾವು ಕೊಟ್ಟಿದ್ದೇವೆ. ಆ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸಗಳು ಆಗುತ್ತಾ ಇವೆ. ಆದರೆ, ಮಾನ್ಯ ಸದಸ್ಯರು ಹಣದ ಕೊರತೆ ಮತ್ತು ಫಲಾನುಭವಿಗಳು ಅಧಿಕಾರಿಗಳನ್ನು ಹಿಡಿಯುವುದಕ್ಕೆ ತೊಂದರೆಯಾಗುತ್ತಿದೆಯೆಂದು ಕೆಲವು ಆಪಾದನೆಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ತಕ್ಷಣ ನಮ್ಮ ಅಧಿಕಾರಿಗಳನ್ನು ಕರೆದು ತಮ್ಮ ವ್ಯಾಪ್ತಿಗೆ ಬರತಕ್ಕ ವಿಚಾರಗಳೇನಿವೆ ಅವುಗಳನ್ನು ಗಮನದಲ್ಲಿಟ್ಟುಕೊಂಡು ಬಹುಶಃ 25ರಂದು ತಮ್ಮ ಜಿಲ್ಲೆಯಲ್ಲೇ ಪ್ರವಾಸ ಮಾಡುತ್ತಿದ್ದೇನೆ. ಆ ಸಂದರ್ಭದಲ್ಲಿ ತಾವೂ ಕೂಡ ಅಲ್ಲಿದ್ದರೆ ಯಾವರೀತಿಯಲ್ಲಿ ತೊಂದರೆಯಾಗುತ್ತಿದೆ ಎನ್ನುವುದನ್ನು ನೋಡಿ ನಾನು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮುಖಾಂತರ ಸದಸ್ಯರಿಗೆ ತಿಳಿಯಬಯಸುತ್ತೇನೆ.

'ಜತ್ರೋಪ' ಬೆಳೆ ಬೆಳೆಯಲು ಸರ್ಕಾರದ ಪ್ರೋತ್ಸಾಹ

183(2568) ಶ್ರೀ ಕೃಷ್ಣ ಪಾಲೇಮಾರ್ ಜೆ.(ಸುರತ್ಕಲ್): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆಯ ರೈತರ ಆದಾಯ ಹೆಚ್ಚಿಸುವ ನೂಡನ ಬೆಳೆ ಜತ್ರೋಪವನ್ನು ಬೆಳೆಯಲು ಸರ್ಕಾರದ ಪ್ರೋತ್ಸಾಹಕ ಕ್ರಮ ಕೈಗೊಳ್ಳುವುದೇ;

ಆ) ಈ ನೂತನ ಬೆಳೆಯನ್ನು ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಬೆಳೆಯಲು ಸರ್ಕಾರ ಅನುಮತಿಸಿದೆ;

ಇ) ಜತ್ರೋಪ ಬೆಳೆ ಯೋಜನೆಯ ಅನುಷ್ಠಾನದ ಹೊಣೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ (ವಿವರ ಒದಗಿಸುವುದು);

ಈ) ಜತ್ರೋಪ ಬೆಳೆಯ ಕುರಿತಾದ ತಂತ್ರಜ್ಞಾನ ಮತ್ತು ಸಸಿಗಳ ಸರಬರಾಜು ಮುಂತಾದ ಸೌಲಭ್ಯಗಳ ವಿವರಗಳೇನು?

ಶ್ರೀ ಆರ್. ಶ್ರೀನಿವಾಸ (ತೋಟಗಾರಿಕೆ ಸಚಿವರು):

ಅ) ಹೌದು. ಜತ್ರೋಪವನ್ನು ಬೆಳೆಯಲು ಸರ್ಕಾರ ಮುಂಬರುವ ದಿನಗಳಲ್ಲಿ ಪ್ರೋತ್ಸಾಹಕ ಕ್ರಮ ಕೈಗೊಳ್ಳುವುದು.

ಆ) ಈ ನೂತನ ಬೆಳೆಯನ್ನು ರಾಜ್ಯದಲ್ಲಿ ರೈತರ ತಾಕುಗಳಲ್ಲಿ ಬೆಳೆಯಲು ಇದುವರೆವಿಗೂ ಸರ್ಕಾರವು ಯೋಜಿಸಿರುವುದಿಲ್ಲ. ಆದರೆ ನೆರೆ ರಾಜ್ಯಗಳಲ್ಲಿ ಈಗಾಗಲೇ ರೈತರ ತಾಕುಗಳಲ್ಲಿ ಜತ್ರೋಪ ಬೆಳೆಯನ್ನು ಬೆಳೆಯುತ್ತಿದ್ದು, ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ರೈತರ ತಾಕುಗಳಲ್ಲಿ ಜತ್ರೋಪ ಬೆಳೆಯಲು ಅನುವಾಗುವಂತೆ ಕ್ರಮ ಕೈಗೊಳ್ಳಲಾಗುವುದು.

ಇ) ಜತ್ರೋಪ ಬೆಳೆ ಯೋಜನೆಯ ಅನುಷ್ಠಾನದ ಹೊಣೆಯನ್ನು ಯಾವ ಸಂಸ್ಥೆಗೂ ವಹಿಸಿರುವುದಿಲ್ಲ.

ಈ) ಕೇಂದ್ರ ಸರ್ಕಾರದ ನವೋಡ್ ಮಂಡಳಿಯಿಂದ ಜತ್ರೋಪ ಬೆಳೆ ಅಭಿವೃದ್ಧಿಗೆ ಅನುದಾನ ಪಡೆಯಬಹುದಾಗಿರುತ್ತದೆ.